ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಕಾಯಿಸಿದ ಕಬ್ಬಿಣಕ್ಕೂ, ಪ್ರಾಯಕ್ಕೆ ಬಂದ ಹೆಣ್ಣಿಗೂ ಏನು ವ್ಯತ್ಯಾಸ?*



ಕಬ್ಬಿಣ ಕಾಯಿಸಿದಾಗ ಮಾತ್ರ ಹಾಟ್; ಪ್ರಾಯದ ಹೆಣ್ಣು ಯಾವಾಗಲೂ ಹಾಟ್.

ಬಿ. ಚಂದ್ರೇಗೌಡ, ಬೆಂಗಳೂರು
*ಪ್ರೀತಿಸುವುದಕ್ಕೂ, ಪ್ರೀತಿಸಲ್ಪಡುವುದಕ್ಕೂ ಏನು ವ್ಯತ್ಯಾಸ?*
ಪ್ರೀತಿಸುವುದು ಭಕ್ತಿ; ಪ್ರೀತಿಸಲ್ಪಡುವುದು ವರ.

ಬೋ.ಪಾ. ವೆಂಕಟೇಶ್, ಹೊಸಕೋಟೆ
*ನಗುವುದಕ್ಕೂ ಲಂಚ ಕೊಡುವಂತಿದ್ದರೆ?*
ಈಗಲೇ ಕೊಡುತ್ತಿದ್ದೇವಲ್ಲ. ಸರ್ಕಾರಿ ಕುಳ ನಗದು ಕಾಣುವವರೆಗೆ ನಗದು.

ಎಂ.ಆರ್. ಮುಕುಂದ, ಬೆಂಗಳೂರು
*ಹಾಸ್ಯಕ್ಕೂ, ಪರಿಹಾಸ್ಯಕ್ಕೂ, ಅವಹೇಳನಕ್ಕೂ ವ್ಯತ್ಯಾಸವಿಲ್ಲವೆ?*
ಹಾಸ್ಯ ಸಿಹಿನೀರು; ಪರಿಹಾಸ್ಯ ಸಮುದ್ರದ ನೀರು; ಅವಹೇಳನ ಕೊಳಚೆನೀರು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ವರನಟ ಡಾ. ರಾಜ್ ನಂತರ ಯಾರೂ ಮ್ಯಾಟಿನೀ ಐಡಲ್ ಆಗಲೇ ಇಲ್ಲವಲ್ಲ ರಾಂ?*




ಅಚ್ಚರಿಯೇನಿಲ್ಲ. ಅಭಿನಯ, ಭಾಷೆಯತ್ತ eye (ದೃಷ್ಟಿ) ಇಲ್ಲದ್ದರಿಂದ ಐಡಲ್ ಆಗುವ ಬದಲು ಡಲ್ ಆದರು.

ಅಮರಯ್ಯಾ ಪತ್ರಿಮಠ, ಸುರಪೂರ
*ಮರಳಿ ಬಾರದ ದಿನಗಳು ಯಾವುವು?*
ಮಳೆಗಾಲ ಮತ್ತು ಚಳಿಗಾಲದ ದಿನಗಳು. ಉರಿಬಿಸಿಲ ಬೇಸಿಗೆಯ ದಿನಗಳು ಮಾತ್ರ ಮರಳಿ ಮರಳಿ ಬರುತ್ತವೆ.

ಪ್ರದೀಪ್ ಎನ್, ಚೆಲುವರಸನಕೊಪ್ಪಲು
*ತಲೆತುಂಬ ಕೂದಲಿರುವವರು ಬುದ್ಧಿವಂತರೋ, ಇಲ್ಲದಿರುವವರು ಬುದ್ಧಿವಂತರೋ?*
ಇಬ್ಬರೂ ಅಲ್ಲ; ಕೂದಲಿದ್ದೂ ಹೆಂಡತಿಯ ಕೈಗೆ ಜುಟ್ಟು ಸಿಗದಂತೆ ಬೋಳಿಸಿಕೊಂಡವರು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸಂಸಾರದಲ್ಲಿ ಹುಳಿ ಹಿಂಡಿದ ಅಂತಾರಲ್ಲ, ಸಂಸಾರ ಅನ್ನೋದು ಹಾಲೇ?*
ಸಂಸಾರ ಇರಬೇಕಾದುದು ಹಾಲಿನಂತೆಯೇ; ಹಾ – ಹಾನಿಗಳು, ಲು – ಲುಪ್ತವಾದುದು.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ದಂಪತಿಗಳಲ್ಲಿ ವಯಸ್ಸಾದ ನಂತರ ಪ್ರೀತಿ ಹೆಚ್ಚಾಗುತ್ತಂತೆ. ಹೌದಾ ಸಾರ್?*
ಹೌದು. ಒಟ್ಟೊಟ್ಟಿಗೆ ವಾಕಿಂಗ್, ಪಾರ್ಕ್ ಅಂತ ಹೋಗುವುದು ಆಗಲೇ ಅಲ್ಲವೆ!

ವೈ.ಎನ್. ಸುಂದರೇಶನ್, ಮೈಸೂರು
*ಪ್ಲಾಸ್ಟಿಕ್ ಅಕ್ಕಿ ಸಹ ಇದೆಯಂತೆ. ನಿಜವೇ ರಾಮ್?*
ನಿಜ. ಒಳ್ಳೇ ಅಕ್ಕಿ. ಎಷ್ಟು ದಿನ ಇಟ್ಟರೂ ಹುಳ ಬೀಳಲ್ಲ.

ಬಸವರಾಜ, ಹುಡೇದಗುಡ್ಡ
*ತಿಂಗಳ ಮೊದಲ ದಿನ ಹುಟ್ಟುವ ಸರ್ಕಾರಿ ನೌಕರನಿಗೂ, ಎರಡನೆಯ ದಿನ ಹುಟ್ಟುವ ಸರ್ಕಾರಿ ನೌಕರನಿಗೂ ಏನು ವ್ಯತ್ಯಾಸ?*
ಎರಡನೆಯ ದಿನ ಹುಟ್ಟಿದವನಿಗೆ ಒಂದು ದಿನದ ಲಂಚ ಖೋತಾ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ಅಮ್ಮನ ಋಣ ಹೇಗೆ ತೀರಿಸಬೇಕು ಸಾರ್?*
ತೀರಿಸಬೇಡಿ. ಅವಳೇ ಮಗಳಾಗಿ ಬಂದು ತೀರಿಸಿಕೊಳ್ಳಲಿ.

ಎಸ್.ಜಿ. ಕರನಂದಿ, ಹುನಗುಂದ
*ಸಣ್ಣವರು ದೊಡ್ಡವರಾಗಲು ಬಹುದಿನ ಬೇಕಾಗುತ್ತದೆ. ದೊಡ್ಡವರು ಸಣ್ಣವರಾಗಲು ಎಷ್ಟು ದಿನ ಬೇಕು?*
ದಿನವಲ್ಲ, ಕ್ಷಣವೇ ಸಾಕು. ಸಿಸಿಟಿವಿ ಕ್ಲಿಪಿಂಗ್ ಸಿಕ್ಕಿದ ಒಂದೇ ಕ್ಷಣಕ್ಕೆ ದೊಡ್ಡವ ಸಣ್ಣವ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಬಾಡಿಹೋಗುವ ಹೂವಿಗೂ, ಓಡಿಹೋಗುವ ಹುಡುಗಿಗೂ ಏನು ವ್ಯತ್ಯಾಸ?*
ಹೂವಿನ ಪಯಣ ತೊಟ್ಟಿಯತ್ತ, ಹುಡುಗಿಯ ಪಯಣ ತೊಟ್ಟಿಲಿನತ್ತ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಸೋಮಶೇಖರ್, ಮೈಸೂರು
*ಬ್ಯೂಟಿ ಪಾರ್ಲರ್ ಮುದುಕಿಯರನ್ನೇ ಏಕೆ ಹೆಚ್ಚಾಗಿ ಆಕರ್ಷಿಸುತ್ತದೆ?*
ಟಿಂಕರಿಂಗ್, ಪೇಂಟಿಂಗ್ ಹೆಚ್ಚಾಗಿ ಬೇಕಾದ್ದು ಹಳೆಯ ಕಾರುಗಳಿಗೇ.

ಹೇಮಾವತಿ ಜೈನ್, ಹೂವಿನಹಡಗಲಿ
*ಲೆಕ್ಕಶಾಸ್ತ್ರದ ಪೀರಿಯಡ್‌ನಲ್ಲಿ ದಡ್ಡ ವಿದ್ಯಾರ್ಥಿಗಳು ಮಾತಿನಶಾಸ್ತ್ರ ಆರಂಭಿಸುತ್ತಾರೆ. ಏನು ಮಾಡಲಿ ರಾಮ್?*
ಛಂದಶಾಸ್ತ್ರ ಆರಂಭಿಸಿ. ಲೆಕ್ಕಕ್ಕೆ ಲೆಕ್ಕವೂ ಆಯಿತು, ನುಡಿಗೆ ನುಡಿಯೂ ಆಯಿತು.

ನಾಗರಾಜ ಪಿ ನಾಯ್ಕ, ಖಾರಗೆಜೂಗ
*ಪ್ರತ್ಯಕ್ಷದೇವತೆಗಳಾದ ಸೂರ್ಯಚಂದ್ರರು ಒಂದು ವೇಳೆ ತಮ್ಮ ನಿತ್ಯದ ಕರ್ತವ್ಯವನ್ನು ಮರೆತರೆ...?*
ರಾಹು-ಕೇತುಗಳನ್ನು ಛೂ ಬಿಡ್ತೀವಿ ಅಂದರೆ ಹೆದರಿ ದಾರಿಗೆ ಬರ್ತಾರೆ.

ಓಂ ಚನ್ನೇಶ್, ಭದ್ರಾವತಿ
*ಟಿವಿ ಧಾರವಾಹಿಗಳಂತೆ ನಮಗೆ ಬೀಳುವ ಕನಸುಗಳಿಗೆ ಮುಂದುವರೆದ ಭಾಗ ಏಕೆ ಕಾಣೋದಿಲ್ಲ?*



ಸ್ಪಾನ್ಸರ್ ಇಲ್ಲದ ಕಾರ್ಯಕ್ರಮಗಳನ್ನು ಮುಂದುವರಿಸಲು ಆಗುವುದಿಲ್ಲ.

ಆರ್. ಮಧುಸೂದನ್, ಹಾಸನ
*ಸೌಂದರ್ಯಪ್ರಜ್ಞೆ ಹದಿಹರೆಯದವರಿಗಿಂತ ವೃದ್ಧರಲ್ಲೇ ಹೆಚ್ಚಾಗುತ್ತಿದೆಯಲ್ಲಾ...?*
ಸ್ಟಾಕ್ ಕಡಿಮೆ ಆಗುತ್ತಿರುವಾಗ ಎಚ್ಚರಿಕೆ ವಹಿಸುವುದು ಬುದ್ಧಿವಂತರ ಲಕ್ಷಣ.

ಕೆ.ವಿ.ಶಿವಕುಮಾರ್‌ಕಾಳೀಹುಂಡಿ, ಮೈಸೂರು
*ನನ್ನ ಸ್ನೇಹಿತನ ಕನಸಿನಲ್ಲಿ ಸ್ವಾಮೀಜಿ ಬರ್ತಾ ಇರ್ತಾರಂತೆ. ಯಾಕಿರಬಹುದು?*
ಆಶ್ರಮದ ಹೆಸರಿನಲ್ಲಿ ಕಲೆಕ್ಷನ್ ಮಾಡಿ ಸ್ವಂತಕ್ಕೆ ಬಳಸಿಕೊಂಡ ದುಡ್ಡನ್ನ ಕೊಟ್ಟಿಡಕ್ಕೆ ಹೇಳಿ.....

■ ರಾಮ್